ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್ ಮಂಜೇಗೌಡ ಇವರು ನಿಯಮ-72ರಡಿ ಪ್ರಸ್ತಾಪಿಸಿರುವ "ನನ್ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರವಾದ ಮೈಸೂರು-ಚಾಮರಾಜನಗರ ಜಿಲ್ಲೆಗೆ ಸೇರಿದ ತಿ. ನರಸೀಪುರ ತಾಲ್ಲೂಕು, ಎಸ್.ಕಂಬೇ ಹುಂಡಿ ಗ್ರಾಮದ ಶ್ರೀ ರಮೇಶ್ ನಾಯಕ ಎಂಬುವವರ ಪುತ್ರಿ ಮೇಘನಾ ರವರು ಚಿರತೆ ದಾಳಿಗೆ ಒಳಗಾಗಿ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ: 01-12-2022 ರಂದು ಮೃತಪಟ್ಟಿರುತ್ತಾರೆ. ಈ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆ ದಿನಾಂಕ: 02.12.2022 ರಂದು ವರದಿಯಾಗಿರುವುದನ್ನು ಈ ಕೂಡ ಲಗತ್ತಿಸಿದೆ. ಸುಮಾರು 23 ವರ್ಷದ ಮೇಘನಾ ರವರು ತಿ.ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಬಹಿರ್ದೆಸೆಗೆಂದು ತೋಟದ ಮನೆ ಹಿತ್ತಲಿಗೆ ಹೋಗಿದ್ದ ಸಮಯದಲ್ಲಿ ಚಿರತೆ ದಾಳಿ ಮಾಡಿದೆ. ತೀವ್ರವಾಗಿ ಗಾಯಗೊಂಡಿದ್ದ ಇವರನ್ನು ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ ಬದುಕುಳಿಯಲಿಲ್ಲ. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಗ್ರಾಮಗಳಿಗೆ ಆನೆಗಳು, ಚಿರತೆಗಳು ಇತರೆ ಕಾಡು ಪ್ರಾಣಿಗಳ ಹಾವಳಿಯು ಅತಿ ಹೆಚ್ಚಾಗಿ ದಾಳಿಯಿಡುತ್ತಿವೆ. ಇದರಿಂದಾಗಿ ನೂರಾರು ರೈತರು ಬಲಿಯಾಗುವುದರೊಂದಿಗೆ, ಅವರು ಬೆಳೆದ ಬೆಳೆಗಳು ಸಹ ನಾಶವಾಗುತ್ತಿದೆ. ನರಹಂತಕ ಚಿರತೆ ದಾಳಿ ನಂತರ ರೈತರು ಕೃಷಿ ಚಟುವಟಿಕೆಗೆ ಹಾಗೂ ಇಟ್ಟಿಗೆ ಕಾರ್ಮಿಕರು ಕೆಲಸಕ್ಕೆ ಹೋಗಲು ಹಿಂಜರಿಯುತ್ತಿದ್ದಾರೆ. ಶಾಲಾ ಕಾಲೇಜಿನ ಮಕ್ಕಳು ತರಗತಿಗೆ ತೆರಳಲು ಭಯ ಭೀತರಾಗಿದ್ದಾರೆ. ಕೇಂದ್ರ ಪರಿಸರ ಸಚಿವಾಲಯದ ಅಂಕಿ-ಅಂಶಗಳ ಪ್ರಕಾರ 2021 ಕ್ಕೆ ಕರ್ನಾಟಕದಲ್ಲಿ 1,783 ಚಿರತೆಗಳಿರುವ ಬಗ್ಗೆ ವರದಿಯಾಗಿದೆ. ಚಿರತೆ ಸಂಖ್ಯೆ ಹೆಚ್ಚಾದರೂ ಕಾಡಿನ ವಿಸ್ತೀರ್ಣ ಅಷ್ಟೇ ಇದೆ. ಹಾಗಾಗಿ ನಾಡಿನತ್ತ ಬರುತ್ತಿದೆ. ಈ ಸಮಸ್ಯೆಗೆ ನಿರ್ದಿಷ್ಟ ಪರಿಹಾರವನ್ನು ಸರ್ಕಾರ ಕಂಡುಹಿಡಿಯಲಿಲ್ಲ. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಚಿರತೆಗಳ ಸಂತತಿ ವೃದ್ಧಿಸುತ್ತಿದೆ. ಚಿರತೆಗಳು ಜನರಿರುವ ಜಾಗಕ್ಕೆ ಬರುತ್ತಿಲ್ಲ. ಜನರೇ ಚಿರತೆಗಳಿರುವ ಜಾಗಕ್ಕೆ ಹೋಗಿ ನೆಲೆಯೂರಿದ್ದರಿಂದ ಇನ್ನೂ ಸಮಸ್ಯೆ ಬಿಗಡಾಯಿಸಿದೆ. ಇಕೋ ಟೂರಿಸಂ ಹೆಸರಿನಲ್ಲಿ ಅರಣ್ಯದಲ್ಲಿ ಮಾನವ ಹಸ್ತಕ್ಷೇಪ ಕಟ್ಟುತ್ತಿದೆ. ರೆಸಾರ್ಟ್, ಟ್ರೆಕ್ಕಿಂಗ್, ಜಲಸಾಹಸಿ ಕ್ರೀಡೆಗಳ ಹೆಸರಿನಲ್ಲಿ ದಟ್ಟ ಅರಣ್ಯದೊಳಗೆ ಜನರು ಲಗ್ಗೆ ಇಡುವಂತಾಗಿದೆ. ಇದರಿಂದ ಏಕಾಂತಕ್ಕೆ ಭಂಗ ಬಂದು ವನ್ಯ ಮೃಗಗಳು ನಾಡಿನತ್ತ ನುಗ್ಗುತ್ತಿವೆ. ಚಿರತೆಗಳು ಹೊಸ ವಾತಾವರಣಕ್ಕೆ ಬೇಗ ಹೊಂದಿಕೊಳ್ಳುತ್ತವೆ. ಕಬ್ಬಿನ ಗದ್ದೆ, ಹೊಲ, ಬೆಟ್ಟ-ಗುಡ್ಡ ಎಲ್ಲೇ ಇದ್ದರೂ ಬದುಕುತ್ತವೆ. ನಗರಗಳ ಹೊರವಲಯದಲ್ಲಿ ಮಾಂಸದ ತ್ಯಾಜ್ಯಗಳ ಬೇಕಾಬಿಟ್ಟಿ ವಿಲೇವಾರಿ ಸಹ ಚಿರತೆಗಳು ಜನವಸತಿ ಪ್ರದೇಶಗಳಿಗೆ ನುಗ್ಗಲು ಕಾರಣ. ಕಾಡಿನಂಚಿನ ಗ್ರಾಮಗಳಲ್ಲಿ, ಪ್ರದೇಶಗಳಲ್ಲಿ ಸಮೃದ್ಧವಾಗಿ ದೊರೆಯುವ ನಾಯಿ, ಕುರಿ-ಕೋಳಿಗಳಿಂದ ಆಕರ್ಷಿತವಾಗುವ ಚಿರತೆಗಳು ಆಹಾರ ಅರಸಿ ಮನುಷ್ಯರ ಮೇಲೆ ದಾಳಿ ನಡೆಸುತ್ತಿವೆ: ಬೆಂಗಳೂರು, ತುಮಕೂರು, ರಾಮನಗರ ನಗರಗಳಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಅತಿ ಹೆಚ್ಚಾಗಿ ಚಿರತೆಗಳು ದಾಳಿ ಮಾಡುತ್ತಿದೆ. ಆದ್ದರಿಂದ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಚಿರತೆ, ಆನೆ ಇನ್ನಿತರೆ ಕಾಡು ಮೃಗಗಳ ದಾಳಿಯನ್ನು ತಡೆಗಟ್ಟಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಾ, ಚಿರತೆ ದಾಳಿಯಿಂದ ಸಾವನ್ನಪ್ಪಿದ ಮೇಘನಾ ಕುಟುಂಬಕ್ಕೆ ಈಗ ನೀಡಿರುವ ಪರಿಹಾರ ಏನೇನು ಸಾಲದು. ಈ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕು ಮತ್ತು ಅವರ ಕುಟುಂಬದ ಸದಸ್ಯರಿಗೆ ಒಂದು ಸರ್ಕಾರಿ ಉದ್ಯೋಗ ನೀಡಬೇಕು ಎಂಬ" ಗಮನ ಸೆಳೆಯುವ ಸೂಚನೆಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.

******

ಮೈಸೂರು ಜಿಲ್ಲೆಯ ಟಿ. ನರಸೀಪುರ ವಲಯ ವ್ಯಾಪ್ತಿಯಲ್ಲಿ ದಿನಾಂಕ: 01.12.2022 ರಂದು ಕು: ಮೇಘನಾ ಎಂಬ ಬಾಲಕಿ ಚಿರತೆ ದಾಳಿಯಿಂದ ಮೃತಪಟ್ಟಿರುತ್ತಾರೆ. ಈ ಸಂಬಂಧ ಸದರಿ ಚಿರತೆಯನ್ನು ಸೆರೆ ಹಿಡಿಯುವ ಬಗ್ಗೆ ಇಲಾಖೆಯ ಸಿಬ್ಬಂದಿಗಳು ಕೂಂಬಿಂಗ್ ಕಾರ್ಯ ನಡೆಸಿ, ಕ್ಯಾಮರಗಳ

...2

ಮಾಹಿತಿಯನ್ವಯ ಸುತ್ತಮುತ್ತಲ ಜಮೀನುಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಅಲ್ಲದೇ ಜನರಿಂದ ಮಾಹಿತಿಯನ್ನು ಪಡೆದು ಕಾರ್ಯಾಚರಣೆ ನಡೆಸಿ, ಚಿರತೆಯನ್ನು ಸೆರೆಹಿಡಿಯುವ ಕ್ರಮದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಗ್ರಾಮಗಳಿಗೆ ಆನೆಗಳು, ಚಿರತೆಗಳು ಇತರ ಕಾಡು ಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-

**ಕಾಡಾನೆ ಹಾವಳಿ ತಡೆಗಟ್ಟಲು :-**

1. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.
2. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
3. ಹಿಮ್ಮೆಟ್ಟಿಸುವ ತಂಡ (ADC) ಹಾಗೂ ಕ್ಷಿಪ್ರ ಸ್ಪಂದನಾ ತಂಡ(Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
4. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.
5. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.
6. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಸೂಕ್ತ ಆವಾಸ ಸ್ಥಾನ / ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.

**ಚಿರತೆ ಹಾವಳಿ ತಡೆಗಟ್ಟಲು:**

ಚಿರತೆ ಬಂದ ಕೂಡಲೇ ಬೋನುಗಳನ್ನು ಇರಿಸಿ ಸೆರೆಹಿಡಿಯಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು 3-4 ಚಿರತೆಗಳನ್ನು ಸೆರೆಹಿಡಿಯಲು ಹಾಗೂ ಚಿರತೆ ಹಾವಳಿ ಇರುವ ಕಡೆ ಜನರಿಗೆ ಜಾಗೃತಿ ಮೂಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

...3

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಹಾಗೂ ಬೆಳೆಹಾನಿ ಪ್ರಕರಣಗಳಿಗೆ ನಿಯಮಾನುಸಾರ ಪಾವತಿಸಲಾದ ದಯಾತ್ಮಕಧನದ ವಿವರ ಈ ಕೆಳಕಂಡಂತಿದೆ:-

| ಜಿಲ್ಲೆ | 2020-21 | | 2021-22 | |
|---|---|---|---|---|
| | ಮಾನವ ಪ್ರಾಣಹಾನಿ ಪ್ರಕರಣ | ಪಾವತಿಸಲಾದ ಮೊತ್ತ (ರೂ.ಲಕ್ಷಗಳಲ್ಲಿ) | ಮಾನವ ಪ್ರಾಣಹಾನಿ ಪ್ರಕರಣ | ಪಾವತಿಸಲಾದ ಮೊತ್ತ |
| ಮೈಸೂರು | 3 | 22.50 | - | - |
| ಚಾಮರಾಜನಗರ | 3 | 22.50 | 2 | 15.00 |

ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07.01.2020ರ ಪ್ರಕಾರ ದಿನಾಂಕ: 01.12.2022ರಂದು ಚಿರತೆ ದಾಳಿಯಿಂದ ಸಾವನ್ನಪ್ಪಿದ ಕು: ಮೇಘನಾ ಕುಟುಂಬಕ್ಕೆ ಪರಿಹಾರ ಮೊತ್ತ ರೂ.7.50 ಲಕ್ಷಗಳ ಪೈಕಿ ಈಗಾಗಲೇ ರೂ.5.00 ಲಕ್ಷ ಪಾವತಿಸಲಾಗಿರುತ್ತದೆ. ದಿನಾಂಕ: 09.12.2022ರಂದು ಉಳಿಕೆ ಬಾಕಿ ರೂ.2.50 ಲಕ್ಷ ದಯಾತ್ಮಕ ಧನ ಪಾವತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಖಾತೆಯಿಂದ ಪಾವತಿಸಲು ಕ್ರಮ ಕೈಗೊಂಡಿದ್ದು, ರಾಜ್ಯ ಹುಜೂರು ಖಜಾನೆಗೆ ಸಲ್ಲಿಸಿದ್ದು, ಖಜಾನೆಯವರು ಮೃತ ವಾರಸುದಾರರ ಉಳಿತಾಯ ಖಾತೆಯ ವಿವರಗಳು ಸರಿಯಿಲ್ಲದ ಕಾರಣ ಬಿಲ್ಲು ವಾಪಾಸ್ಸಾಗಿದ್ದು, ಇ-ಪಾವತಿಯಾಗದೇ ಬಾಕಿ ಉಳಿದಿರುತ್ತದೆ. ಮೃತ ವಾರಸುದಾರರು ಉಳಿತಾಯ ಖಾತೆಯ ಖಚಿತ ವಿವರಗಳನ್ನು ದಿನಾಂಕ: 21.12.2022ರಂದು ಸಲ್ಲಿಸಿದ್ದು, ಈ ಕುರಿತು ಬಿಲ್ಲನ್ನು ತಯಾರಿಸಿ ಖಜಾನೆಗೆ ಸಲ್ಲಿಸಲು ಕ್ರಮಕೈಗೊಳ್ಳಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 15.12.2022ರಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣ ಹಾನಿ ಪ್ರಕರಣಗಳಿಗೆ ಪ್ರಸ್ತುತ ನೀಡುತ್ತಿರುವ ದಯಾತ್ಮಕ ಧನ ರೂ. 7.50 ಲಕ್ಷಗಳನ್ನು ರೂ.15.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಹಾಗೂ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಹಾಗೂ ಶಾಶ್ವತ ಅಂಗವಿಕಲತೆಗೊಳಗಾದ ವ್ಯಕ್ತಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಾಶನ ರೂ.2,000/- ಗಳನ್ನು ರೂ.4,000/- ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.

ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟ ಸಂದರ್ಭದಲ್ಲಿ ಮೃತ ವ್ಯಕ್ತಿಯ ವಾರಸುದಾರಿಗೆ ಸರ್ಕಾರಿ ಉದ್ಯೋಗ ನೀಡುವ ಬಗ್ಗೆ ಯಾವುದೇ ಸರ್ಕಾರದ ಆದೇಶ ಇರುವುದಿಲ್ಲ.

**ಇ-ಸಂಖ್ಯೆ: ಅಪಜೀ.205 ಎಫ್‌ಡಬ್ಲ್ಯೂಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ